ಅಧ್ಯಕ್ಷರು.—ಬಳ್ಳಾರಿ ಡಿಸ್ಟ್ರಿಕ್ಟ್ ಫಾರ್ಮರ್ಸ್ ಅಸೋಸಿಯೇಷನ್‌ನವರು ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ೧೬ನೇ ತಾರೀಖು ನೋಟೀಸ್ ಕೊಟ್ಟಿದ್ದಾರೆ. ಅದನ್ನು ತಕ್ಷಣವೇ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಬಹುಶಃ ನಾಳೆ ಉತ್ತರ ಬರಬಹುದು. ಉತ್ತರ ಬಂದ ತಕ್ಷಣವೇ ಅದನ್ನು ಅಜೆಂಡಾದಲ್ಲಿ ಸೇರಿಸುತ್ತೇವೆ.

SRI A. LAKSHMISAGAR.—Sir, Bellary is not far away. They can get the information telegraphically. So, may I take it for granted that the matter would be posted in the agenda on Monday ?

ಶ್ರೀ ಭೀಮಣ್ಣ ಖಂಡ್ರೆ.— ಇಷ್ಟು ಮಾತನಾಡಲಿಕ್ಕೆ ಅವಕಾಶ ನನಗೆ ಕೊಟ್ಟಿದ್ದರೆ ಸಾಕಾಗಿತ್ತು ಎಂದು ಹೇಳುತ್ತೇನೆ. ೨೮ನೇ ನಿಯಮದ ಕೆಳಗೆ ಸದಸ್ಯರು ಯಾವ ರೀತಿ ಇರಬೇಕೆಂದು ಇರುತ್ತದೆ. ಅದೇ ರೀತಿ ಅಧ್ಯಕ್ಷರೂ ಕೂಡ ಯಾವ ರೀತಿ ಇರಬೇಕೆಂಬುದಕ್ಕೆ ಒಂದು ತಿದ್ದುಪಡಿಯನ್ನು ಮಾಡ ಬೇಕೆಂದು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ.

Taking up some notices from members

ಶ್ರೀ ಸಿ. ಎಂ. ಇಬ್ರಾಹಿಮ್ (ಶಿವಾಜಿ ನಗರ).—ಮಾನ್ಯ ಸಭಾಪತಿಗಳೆ ನಾನು ೧೫-೨೦ ದಿವಸ ಗಳ ಹಿಂದೆ ಗೋ ಹತ್ಯದ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿಕೊಟ್ಟಿದ್ದೆ. ಅದರ ಬಗ್ಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು.—ತಮ್ಮ ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗೆ ಪೂರ್ಣವಾಗಿ ಇನ್‌ಫರ್‌ಮೇಷನ್ ಬೇಕಾಗಿದ್ದರೆ ಸ್ವಲ್ಪ ನಿಧಾನಿಸಿ. ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತಿದ್ದೇನೆ. ಈಗಲೇ ಬೇಕು ಎಂದರೆ ತಾವು ಮಂತ್ರಿಗಳಿಂದ ಉತ್ತರ ನಿರೀಕ್ಷಿಸಬಹುದು.

ಶ್ರೀ ಸಿ. ಎಂ. ಇಬ್ರಾಹಿಮ್.—ಸ್ವಾಮಿ, ಬಸ್‌ಗಳು ಇಲ್ಲದೆ ಸಾರ್ವಜನಿಕರಿಗೆ ಬಹಳ ತೊಂದರೆ ಯುಂಟಾಗಿರುತ್ತದೆ. ಅವರು ಬಸ್‌ಗಳಿಗೆ ಕಲ್ಲನ್ನು ಹೊಡೆಯುತಕ್ಕಂಥ ಪರಿಸ್ಥಿತಿ ಉಂಟಾಗಿರುತ್ತದೆ.

ಅಧ್ಯಕ್ಷರು.—ಇನ್‌ಫರ್‌ಮೇಷನ್ ಕೇಳಿ ಸರ್ಕಾರಕ್ಕೆ ತಿಳಿಸಿರುತ್ತೇನೆ. ಉತ್ತರ ಬಂದ ತಕ್ಷಣ ಅಜೆಂಡಾದಲ್ಲಿ ಸೇರಿಸುತ್ತೇನೆ. I will look into that.

Taking up Calling Attention Notice about drinking water at Sagar

ಶ್ರೀ ಕೆ. ವೆಂಕಟಪ್ಪ (ಶಿಕಾರಿಪುರ).—ಸ್ವಾಮಿ, ಸಾಗರ್ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುತ್ತದೆಂದು ತಿಳಿಸಿದ್ದೆನು.....

ಅಧ್ಯಕ್ಷರು.—ವೈಯಕ್ತಿಕ ಕುಂದುಕೊರತೆಗಳು ಇದ್ದರೆ ನನ್ನ ಚೇಂಬರ್‌ಗೆ ಬಂದು ಮಾತನಾಡ ಬೇಕೆಂದು ತಮಗೆ ಈಗಾಗಲೇ ತಿಳಿಸಿರುತ್ತೇವೆ. ದಯವಿಟ್ಟು ನನ್ನ ಚೇಂಬರ್‌ಗೆ ಬನ್ನಿ. ಆದರ ಬಗ್ಗೆ ಮಾತನಾಡೋಣ .

ಶ್ರೀ ಕೆ. ವೆಂಕಟಪ್ಪ.— Employment Affirmation Scheme ಬಗ್ಗೆ ಮಳ್ಳೊಂದು ಕಾಲಿಂಗ್ ಅಟೆನ್‌ಶನ್ ಕಳುಹಿಸಿ ಕೊಟ್ಟಿದ್ದೆ. ಕೂಲಿಗಾರರಿಗೆ ದವಸ ಧಾನ್ಯಗಳು ಸಿಕ್ಕದೆ ಬಹಳ ತೊಂದರೆ ಪಡುತ್ತಿದ್ದಾರೆ.

ಅಧ್ಯಕ್ಷರು. ನೀವು ನನ್ನ ಚೆಂಬರ್‌ಗೆ ಬನ್ನಿ ಅದರ ಬಗ್ಗೆ ಎಲ್ಲವನ್ನು ಹೇಳುತ್ತೇನೆ. ಶ್ರೀ ರಾಮ ಚಂದ್ರ ರೆಡ್ಡಿಯವರೆ ಈಗಾಗಲೇ ಒಂದೂವರೆ ಗಂಟೆಯಾಗಿರುತ್ತದೆ. ೫ ಗಂಟೆಗೆಲ್ಲ ಮಾನ್ಯ ಸಚಿವರಿಗೆ ಉತ್ತರವನ್ನು ಕೊಡಲು ಅವಕಾಶವನ್ನು ಮಾಡಿ ಕೊಡ ಬೇಕಾಗಿರುತ್ತದೆ. ಇನ್ನು ಮೂರೂವರೆ ಗಂಟೆ ಗಳ ಕಾಲ ಉಳಿದಿರುತ್ತದೆ. ಇನ್ನೂ ಐದು ಜನ ಮಾತನಾಡತಕ್ಕಂಥ ಮಾನ್ಯ ಸ್ನೇಹಿತರು ಇರುತ್ತಾರೆ. ಅವರಿಗೆಲ್ಲ ಅವಕಾಶ ಮಾಡಿಕೊಡಬೇಕು. ಇನ್ನೂ ಮಾನ್ಯ ಗಂಗಾಧರ್, ಕಕ್ಕಿಲಾಯ, ಆರ್ಮುಗಮ್

ಇವರೆಲ್ಲರೂ ಕೂಡ ಮಾತನಾಡುವವರಿದ್ದಾರೆ. ತಾವು ನಿನ್ನೆ ಅರ್ಧ ಗಂಟೆ ಮಾತನಾಡಿರುತ್ತೀರಿ. ಇನ್ನೂ ೧೫ ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿ ಬೇರೆ ಸ್ನೇಹಿತರಿಗೂ ಮಾತನಾಡಲು ಅವಕಾಶ ಮಾಡಿ ಕೊಡಿ.

BUDGET ESTIMATES FOR 1979-80.—Demands for grants

Demand Nos. 42, 43, 44 and 45 (Debate continued)

†ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ (ಪತೂರು).—ಲೋಕೋಪಯೋಗಿ ಇಲಾಖೆ ಬಹಳ ಮಹತ್ವರವಾದ ಇಲಾಖೆಯಾಗಿರುತ್ತದೆ. ಟೆಕ್ನಿಕಲ್ ಸಬ್ಜಕ್ಟ್ ಬಹಳವಾಗಿ ಇರುತ್ತದೆ. ಮಾನ್ಯ ಸಚಿವರು ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಬೇಕಾಗುತ್ತದೆ. ಆದ್ದರಿಂದ.....

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ ಅವರಿಗೆ ೨ ಗಂಟೆಯ ತನಕ ಮಾತನಾಡಲು ಅವಕಾಶ ಕೊಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಬೇರೆಯವರಿಗೆ ಏನು ಮಾಡುವುದು. ಇನ್ನು ಎಂ.ಸಿ. ಬಸಪ್ಪನವರು ಮಾತನಾಡ ಬೇಕೆಂದು ಹೇಳಿರುತ್ತಾರೆ. ಆದ್ದರಿಂದ ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಲೋಕೋಪಯೋಗಿ ಇಲಾಖೆಯಲ್ಲಿ ಮೊದಲು ಮೂರು ಜನ ಮುಖ್ಯ ಇಂಜಿನೀಯರುಗಳನ್ನು ಇಟ್ಟುಕೊಂಡು ಮಾಡುತ್ತಿದ್ದ ಕೆಲಸಗಳನ್ನು ಈಗ ೩೦ ಜನರು ಬಂದಿರುತ್ತಾರೆ. ಇನ್ನೂ ೧೦ ಜನರನ್ನು ಕ್ರಿಯೇಟ್ ಮಾಡಿದರೂ ಪರವಾಗಿಲ್ಲ, ಹೆಚ್ಚು ಜನರನ್ನು ಮಾಡಿ ಎಂದು ಹೇಳುತ್ತೇನೆ. ಅನಂತರ ಕ್ವಾಲಿಟಿ ಕಂಟ್ರೋಲ್ ಎಂದು ಸಿ.ಓ.ಡಿ. ಇಲಾಖೆಗೆ ಒಬ್ಬ ಚೀಫ್ ಇಂಜಿನೀಯರನ್ನು ಪೋಸ್ಟ್ ಮಾಡಿ. ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸಗಳು ನಡೆಯುತ್ತದೆಂದು ನನ್ನ ಅನುಭವದಿಂದ ಹೇಳುತ್ತಿದ್ದೇನೆ.

ಸ್ವಾಮಿ ಬಹಳ ದಿವಸಗಳ ಹಿಂದೆ ಆರ್ಕಿಟೆಕ್ಟ್ ಎನ್ನುತಕ್ಕಂಥ ಪೋಸ್ಟ್ ಇತ್ತು. ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಚೀಫ್ ಆರ್ಟಿಟೆಕ್ಟ್ ಪೋಸ್ಟ್ ಎಂದು ಲೋಕೋಪಯೋಗಿ ಇಲಾಖೆಯಲ್ಲಿ ಇತ್ತು. ಈ ಪೋಸ್ಟ್‌ನಲ್ಲಿ ಹಿಂದೆ ಶ್ರೀ ಹನುಮಂತ ನಾಯ್ಡು ಎಂಬುವರು ಇದ್ದರು. ಅವರು ಹೋದ ಮೇಲೆ ಈ ಪೋಸ್ಟ್ ಬೇರೆಯವರ ಕೈಯಲ್ಲಿ ಇನ್‌ಚಾರ್ಜ್‌ನಲ್ಲಿ ಇಟ್ಟು ಕೊಂಡಿದ್ದಾರೆ. ಇದನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಬೇಕೆಂದು ಹೇಳುತ್ತೇನೆ.

೧.೩೦ ಪಿ. ಎಂ.

ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಇಂಜಿನಿಯರುಗಳಾದ ಮೇಲೆ ಎರಡನೆಯದಾಗಿ ಬರುವ ಮಹತ್ವರ ಹುದ್ದೆಗಳೆಂದರೆ ''ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳು'' ಸೂಪರಿಂಟೆಂಡೆಂಟಿಕ ಇಂಜಿನಿಯರ್‌ಗಳ ಕಚೇರಿಗಳು ಅಂಚೆ ಕಚೇರಿಗಳು ! ಇಲ್ಲಿ ಯಾವುದಾದರೊಂದು ಫೈಲಿಗೆ ವಿರಾಮ ಹಾಗಿ ಬೇಕೆಂದು ಮನಸ್ಸು ಮಾಡಿದರೆ ಆದನ್ನಲ್ಲಿಯೇ ಮುಗಿಸಿ ಬಿಡುತ್ತಾರೆ. ಮೇಲಕ್ಕೆ ಕಳುಹಿಸಬೇಕೆನ್ನುವ ಮನಸ್ಸಿದ್ದರೆ, ಆರಾಮವಾಗಿ ಮೇಲಕ್ಕೆ ಕಳುಹಿಸಿಕೊಡುತ್ತಾರೆ. ಇವರು ಯಾವುದೇ ತೀರ್ಮಾನವನ್ನೂ ತೆಗೆದುಕೊಳ್ಳುವುದಿಲ್ಲ. ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರಿಂದ ಬರುವ ಫೈಲುಗಳನ್ನು ಮೇಲೆ ಯಾವುದೇ ಸಲಹೆ ಅಥವಾ ಸೂಚನೆಯನ್ನು ಕೊಡದೆ ಅದನ್ನು ಸೀದಾ ಮುಖ್ಯ ಇಂಜಿನಿಯರ್ ಅವರಿಗೆ ಹೊತ್ತಾಕಿ ಬಿಡುತ್ತಾರೆ. ಈ ಕೆಲಸ ಮಾಡುವುದಕ್ಕೇನು ಅವರನ್ನು ಇಟ್ಟಿರುವುದು ? ಅವರಿಗೆ ಏನು ಅಧಿಕಾರವಿದೆ ಮತ್ತು ಇರುವ ಅಧಿಕಾರವನ್ನು ಸರಿಯಾಗಿ ಚಲಾಯಿಸುತ್ತಿದ್ದಾರೆಯೇ ಎನ್ನುವುದನ್ನು ಮಾನ್ಯ ಸಚಿವರು ಪರಿಶೀಲಿಸಬೇಕು. ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಇನ್ನೊಂದು ಕೆಲಸ : ಇಲಾಖೆಯಲ್ಲಿ ಓವರ್ ಎಂಪ್‌ಲಾಯ್‌ಮೆಂಟ್ ಇದೆಯೇ, ಆಂಡರ್ ಎಂಪ್ಲಾಯಿಮೆಂಟ್ ಇದೆಯೇ, ಯೋಜನೆಗಳು ಸರಿಯಾಗಿ ಕಾರ್ಯಗತವಾಗುತ್ತಿವೆಯೇ ಅಥವಾ ಇಲ್ಲವೆ, ಹೆಚ್ಚುವರಿ ಇಂಜಿನಿಯರ್‌ಗಳು ಇರುವರೆ ಅಥವಾ ಇಲ್ಲವೆ, ಒಂದೊಂದು ಸರ್ಕಲ್‌ನಲ್ಲೂ ಹೆಚ್ಚುವರಿ ಕೆಲಸಗಳಿವೆಯೇ ಅಥವಾ ಎಲ್ಲಾ